CCE-II-RR/PR/NSR/NSPR(B)/999/8034

**B**

## ಜೂನ್ 2024 ರ ಪರೀಕ್ಷೆ - 2
## JUNE 2024 EXAMINATION - 2

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**CCE RR/PR/ NSR/NSPR**
**Reduced Syllabus**

Question Paper Serial No.

**ಸಂಕೇತ ಸಂಖ್ಯೆ : 96-K**
**Code No. : 96-K**

# ವಿಷಯ : ಅರ್ಥಶಾಸ್ತ್ರ
# Subject : ECONOMICS

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.**
**(Regular Repeater / Private Repeater / NSR / NSPR)**

ದಿನಾಂಕ : 19. 06. 2024 ] [ Date : 19. 06. 2024
ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-15 A.M. to 1-30 P.M.
ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ***ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

**19. 06. 2024**

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ಹಿಂದುಳಿದ ರಾಷ್ಟ್ರಗಳ ಪ್ರಮುಖ ಲಕ್ಷಣವೆಂದರೆ

    (A) ಹೆಚ್ಚಿನ ನಗರೀಕರಣ

    (B) ಹೆಚ್ಚಿನ ಅಪೌಷ್ಠಿಕತೆ

    (C) ಹೆಚ್ಚಿನ ಸಾಕ್ಷರತೆ

    (D) ಹೆಚ್ಚಿನ ಜೀವನ ಗುಣಮಟ್ಟ

2. ಭಾರತದ ಹೊಸ ಕೈಗಾರಿಕಾ ನೀತಿಯು

    (A) 1991

    (B) 1990

    (C) 1995

    (D) 2000

3. “ಕೈಗಾರೀಕರಣಗೊಳಿಸಿ ಇಲ್ಲವೇ ವಿನಾಶವಾಗಿ” ಎಂದು ಹೇಳಿದವರು

(A) ದಾದಾಬಾಯಿ ನವರೋಜಿ

(B) ಮಹಾತ್ಮಾ ಗಾಂಧಿ

(C) ಅಮರ್ತ್ಯ ಸೇನ್

(D) ಸರ್. ಎಂ. ವಿಶ್ವೇಶ್ವರಯ್ಯ

4. 2013-14 ರಲ್ಲಿ ಭಾರತದಿಂದ ಅತಿ ಹೆಚ್ಚು ರಫ್ತು ಪಡೆದ ದೇಶ

(A) ಜರ್ಮನಿ

(B) ಪಾಕಿಸ್ತಾನ

(C) ಯು.ಎಸ್.ಎ.

(D) ಚೈನಾ

5. ವ್ಯಾಪಾರದ ಪ್ರಕಾರಗಳಲ್ಲಿ ಪ್ರಮುಖವಾದ ವಿಧಗಳೆಂದರೆ

(A) ಆಂತರಿಕ ಹಾಗೂ ಬಾಹ್ಯ ವ್ಯಾಪಾರ

(B) ಆಂತರಿಕ ಹಾಗೂ ಅಂತರಿಕ್ಷ ವ್ಯಾಪಾರ

(C) ಆಂತರಿಕ ಹಾಗೂ ಅಂತರ ರಾಜ್ಯ ವ್ಯಾಪಾರ

(D) ಮಾರುಕಟ್ಟೆ ಹಾಗೂ ಅಂತರ ರಾಜ್ಯ ವ್ಯಾಪಾರ

6. ಕೃಷಿ ಹಣಕಾಸಿನ ಅತ್ಯುನ್ನತ ಬ್ಯಾಂಕು

(A) ನಬಾರ್ಡ್

(B) ಭೂ ಅಭಿವೃದ್ಧಿ ಬ್ಯಾಂಕು

(C) ಸರ್ಕಾರಿ ಬ್ಯಾಂಕು

(D) ಲೇವಾದೇವಿದಾರರು

7. ಸುರೇಶ್ ತೆಂಡೂಲ್ಕರ್‌ರವರು ಬಡತನವನ್ನು ಅಳೆಯಲು ಬಳಸಿದ ಮಾನದಂಡ

(A) ತಲಾ ಆದಾಯ

(B) ತಲಾ ಅನುಭೋಗ ವೆಚ್ಚ

(C) ಪ್ರತಿದಿನ ಸೇರಿಸುವ ಕ್ಯಾಲರಿಗಳು

(D) ಶಿಕ್ಷಣ, ಆರೋಗ್ಯಕ್ಕೆ ಮೀಸಲಿಟ್ಟ ವೆಚ್ಚ

8. ಕರ್ನಾಟಕದಲ್ಲಿ ಇರುವ ರೈಲ್ವೆ ವಲಯವೆಂದರೆ

(A) ಈಶಾನ್ಯ ರೈಲ್ವೆ

(B) ನೈರುತ್ಯ ರೈಲ್ವೆ

(C) ದಕ್ಷಿಣ ರೈಲ್ವೆ

(D) ಪೂರ್ವ ರೈಲ್ವೆ

9. ಭಾರತೀಯ ಅಂಚೆ ಸೇವೆಯು

(A) ಸಾರ್ವಜನಿಕ ವಲಯದ ಸಂಸ್ಥೆಯಾಗಿದೆ

(B) ಖಾಸಗಿ ವಲಯದ ಸಂಸ್ಥೆಯಾಗಿದೆ

(C) ಮಿಶ್ರ ವಲಯದ ಸಂಸ್ಥೆಯಾಗಿದೆ

(D) ಸಾಮಾಜಿಕ ವಲಯದ ಸಂಸ್ಥೆಯಾಗಿದೆ

10. ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಯಾಗಿದ್ದು

(A) 1ನೇ ಏಪ್ರಿಲ್, 1950

(B) 1ನೇ ಮಾರ್ಚ್, 1934

(C) 1ನೇ ಏಪ್ರಿಲ್, 1949

(D) 1ನೇ ಏಪ್ರಿಲ್, 1935

**II.** 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :**

**5 × 1 = 5**

| ***A*-ಪಟ್ಟಿ** | | ***B*-ಪಟ್ಟಿ** | |
|---|---|---|---|
| (A) | ಭೂ ಸಾರಿಗೆ | (i) | ಇ–ಮೇಲ್ |
| (B) | ಜಲ ಸಾರಿಗೆ | (ii) | ವಿಮಾನಗಳು |
| (C) | ವಾಯು ಸಾರಿಗೆ | (iii) | ಆರ್ಥಿಕ ಮೂಲಭೂತ ಸೌಕರ್ಯ |
| (D) | ಸಂಪರ್ಕ ವ್ಯವಸ್ಥೆ | (iv) | ರೈಲುಗಳು |
| (E) | ಅಂತರ್ಜಾಲ ಸೇವೆ | (v) | ಸಾರ್ವಜನಿಕ ವಲಯ |
| | | (vi) | ಹಡಗುಗಳು |
| | | (vii) | ಅಂಚೆ ವ್ಯವಸ್ಥೆ |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. "ಒಂದು ರಾಷ್ಟ್ರವು ಬಡರಾಷ್ಟ್ರವಾಗಿರುವುದಕ್ಕೆ ಕಾರಣ ಬಡತನವಾಗಿದೆ." ಎಂದು ಹೇಳಿದವರು ಯಾರು ?

13. ಯಾವುದಾದರೂ ಎರಡು ಅಭಿವೃದ್ಧಿ ಹೊಂದಿದ ರಾಷ್ಟ್ರಗಳನ್ನು ಹೆಸರಿಸಿ.

14. ಸೇವಾ ವಲಯದಲ್ಲಿ ಸಣ್ಣ ಕೈಗಾರಿಕೆಗಳ ಹೂಡಿಕೆಯ ಮಿತಿ ಎಷ್ಟು ?

15. ಕೈಗಾರೀಕರಣ ಎಂದರೇನು ?

16. ಅಲ್ಪಾವಧಿ ಸಾಲದ ಅವಧಿ ಎಷ್ಟು ?

17. ಕೈಗಾರಿಕಾ ಎಸ್ಟೇಟ್‌ಗಳನ್ನು ಏಕೆ ಸ್ಥಾಪಿಸಲಾಯಿತು ?

18. ಸಾಪೇಕ್ಷ ಬಡತನ ಎಂದರೇನು ?

19. ಮೂಲಭೂತ ಸೌಕರ್ಯಗಳ ಅರ್ಥವನ್ನು ವ್ಯಾಖ್ಯಾನಿಸಿ.

20. ಜಲಸಾರಿಗೆಯ ಎರಡು ವಿಧಗಳನ್ನು ಹೆಸರಿಸಿ.

21. ನೋಟು ಚಲಾವಣೆಗೆ ಭಾರತೀಯ ರಿಸರ್ವ್ ಬ್ಯಾಂಕು ಅನುಸರಿಸುತ್ತಿರುವ ಪದ್ಧತಿ ಯಾವುದು ?

22. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಧಾನ ಕಛೇರಿಯು ಎಲ್ಲಿ ಸ್ಥಾಪಿತವಾಗಿದೆ ?

23. ವ್ಯಾಪಾರ ಎಂದರೇನು ?

24. ವಿದೇಶಿ ವಿನಿಮಯ ಎಂದರೇನು ?

25. ಅಮೆರಿಕಾದ ಚಲಾವಣೆಯಲ್ಲಿರುವ ಹಣ (ಕರೆನ್ಸಿ) ದ ಹೆಸರೇನು ?

26. ಆಂತರಿಕ ವ್ಯಾಪಾರವನ್ನು ವ್ಯಾಖ್ಯಾನಿಸಿ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**14 × 2 = 28**

27. ಅಭಿವೃದ್ಧಿ ಹೊಂದಿದ ದೇಶಗಳ ಪ್ರಮುಖ ಲಕ್ಷಣಗಳು ಯಾವುವು ?

28. ಭಾರತವು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಸಾಲಿನಲ್ಲಿದೆ ಎಂದು ಸಮರ್ಥಿಸಿ.

29. ಬಡತನದ ರೇಖೆಯನ್ನು ವ್ಯಾಖ್ಯಾನಿಸಿ.

30. ಬಡತನದ ವಿಧಗಳನ್ನು ಹೆಸರಿಸಿ.

31. ಈಗಾಗಲೇ ಜಾರಿಯಲ್ಲಿದ್ದ ಯಾವ ಕಾರ್ಯಕ್ರಮಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಸೇರಿಸಲಾಯಿತು ?

32. ಬಡತನದ ರೇಖೆಯ ಎರಡು ಗುಂಪುಗಳಾವುವು ?

33. ನಗರ ಪ್ರದೇಶಗಳಲ್ಲಿ ಬಡತನ ನಿರ್ಮೂಲನೆಗೆ ಕೈಗೊಂಡಿರುವ ಕಾರ್ಯಕ್ರಮಗಳಾವುವು ?

34. ದೇಶದ ಆರ್ಥಿಕತೆಯಲ್ಲಿ ಕೈಗಾರಿಕೆಗಳು ಪ್ರಮುಖ ಪಾತ್ರ ನಿರ್ವಹಿಸುತ್ತದೆ. ವಿವರಿಸಿ.

35. ಫೆಮಾ ( FEMA )ದ ಗುರಿಗಳೇನು ?

36. ಸಣ್ಣ ಪ್ರಮಾಣದ ಕೈಗಾರಿಕೆಗಳ ಸಮಸ್ಯೆಗಳಾವುವು ?

37. ಬಂಡವಾಳ ಹೂಡಿಕೆಯ ಆಧಾರದ ಮೇಲೆ ಕೈಗಾರಿಕೆಗಳ ವರ್ಗೀಕರಣಗಳನ್ನು ತಿಳಿಸಿ.

38. ಭಾರತದ ಸಾರಿಗೆಯ ಪ್ರಕಾರಗಳಾವುವು ?

39. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಾದೇಶಿಕ ಕೇಂದ್ರ ಕಛೇರಿಗಳನ್ನು ಎಲ್ಲಿ ಸ್ಥಾಪಿಸಲಾಗಿದೆ ?

40. ಭಾರತೀಯ ರಿಸರ್ವ್ ಬ್ಯಾಂಕಿನ ಯಾವುದಾದರೂ ಎರಡು ಮುಖ್ಯ ಕಾರ್ಯಗಳನ್ನು ತಿಳಿಸಿ.

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**6 × 3 = 18**

41. ಬಡತನದ ವಿಷವರ್ತುಲವನ್ನು ಬೇಡಿಕೆ ಮತ್ತು ಪೂರೈಕೆ ಕಡೆಯಿಂದ ವಿಶ್ಲೇಷಿಸಿ.

42. 1991 ರ ಹೊಸ ಕೈಗಾರಿಕಾ ನೀತಿಯ ಪ್ರಮುಖ ಲಕ್ಷಣಗಳನ್ನು ತಿಳಿಸಿ.

43. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕಿನ ಪ್ರಮುಖ ಕಾರ್ಯಗಳಾವುವು ?

44. ಭಾರತೀಯ ರಿಸರ್ವ್ ಬ್ಯಾಂಕಿನ ತರಬೇತಿ ಸಂಸ್ಥೆಗಳಾವುವು ?

45. ಭಾರತದಲ್ಲಿ ಬಡತನಕ್ಕೆ ಪ್ರಮುಖ ಕಾರಣಗಳನ್ನು ತಿಳಿಸಿ.

46. ವಿದೇಶಿ ವ್ಯಾಪಾರದಿಂದಾಗುವ ಪ್ರಯೋಜನಗಳಾವುವು ?

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : $1 \times 4 = 4$**

47. ಸಣ್ಣ ಪ್ರಮಾಣದ ಕೈಗಾರಿಕೆಗಳ ಮಹತ್ವವೇನು ?

DO NOT WRITE ANYTHING HERE